# ಎನ್‌ಐಟಿಕೆ: ದಿವ್ಯಾಂಗ ವಿದ್ಯಾರ್ಥಿಗಳಿಗೆ ಸ್ಮಾರ್ಟ್ ಇ ಮೊಬಿಲಿಟಿ ವಾಹನ ಕೊಡುಗೆ

**ಮಂಗಳೂರು:** ಜಿಪಿಎಸ್‌ಟ್ರ್ಯಾಕಿಂಗ್ ಮತ್ತು ಸ್ಮಾರ್ಟ್ ಲಾಕ್ ತಂತ್ರ ಜ್ಞಾನ ಹೊಂದಿರುವ ಇ-ಮೊಬಿಲಿಟಿ ವಾಹನಗಳನ್ನು ಎನ್‌ಐಟಿಕೆ ಸುರತ್ಕಲ್‌ನ ದಿವ್ಯಾಂಗ ವಿದ್ಯಾರ್ಥಿಗಳಿಗೆ ಹಸ್ತಾಂತರಿಸಲಾಯಿತು.

ಎನ್‌ಐಟಿಕೆ ಕ್ಯಾಂಪಸ್‌ನಲ್ಲಿ ಇತ್ತೀಚೆಗೆ ಸಮಾರಂಭದಲ್ಲಿ ಪೆಟ್ರೋನೆಟ್ ಎಂಎಚ್‌ಬಿ ಲಿಮಿಟೆಡ್‌ನ ವ್ಯವಸ್ಥಾಪಕ ನಿರ್ದೇಶಕ ಹಾಗೂ 1989ರ ಮೆಕ್ಯಾನಿಕಲ್ ಎಂಜಿನಿಯರಿಂಗ್ ಬ್ಯಾಚ್‌ನ ಹಳೆಯ ವಿದ್ಯಾರ್ಥಿ ಸುಧೀರ್ ಕುಮಾರ್ ಹಾಗೂ ಎನ್‌ಐಟಿಕೆ ಸುರತ್ಕಲ್ ನಿರ್ದೇಶಕ ಪ್ರೊ. ಬಿ. ರವಿ ಅವರು ಹಸ್ತಾಂತರಿಸಿದರು.

ಈ ವಾಹನಗಳನ್ನು ಎನ್‌ಐಟಿಕೆ ಸುರತ್ಕಲ್‌ನ ಸಹ ಪ್ರಾಧ್ಯಾಪಕ ಡಾ. ಪೃಥ್ವಿರಾಜ ಅವರು ಸಂಸ್ಥೆಯೊಳಗೆ ವಿನ್ಯಾಸಗೊಳಿಸಿ ತಯಾರಿಸಿದ್ದಾರೆ. ಎಲ್ಲಾ ವಾಹನಗಳು 1970ರ ಬ್ಯಾಚ್‌ನ ಹಳೆಯ ವಿದ್ಯಾರ್ಥಿಗಳ ಸಹಕಾರದಿಂದ 2022ರಲ್ಲಿ ಸ್ಥಾಪಿಸಲಾದ 'ಉರ್ಜಾ' ಸೌರಶಕ್ತಿ ಚಾರ್ಜಿಂಗ್ ಸ್ಟೇಷನ್‌ಗೆ ಹೊಂದಿಕೊಳ್ಳುವಂತಿವೆ. ಈ ಯೋಜನೆಗೆ ಪೆಟ್ರೋನೆಟ್ ಎಂಎಚ್‌ಬಿ ಲಿಮಿಟೆಡ್ 2025-26ನೇ ಸಾಲಿನ ಸಿಎಸ್‌ಆರ್ ಯೋಜನೆಯಡಿ ನಿಧಿ ಒದಗಿಸಿದೆ.



ಕಾರ್ಯಕ್ರಮದಲ್ಲಿ ಮಾತನಾಡಿದ ಸುಧೀರ್ ಕುಮಾರ್, ಎನ್‌ಐಟಿಕೆಗಳಲ್ಲಿ ಪ್ರವೇಶ ಪಡೆಯುವ ದಿವ್ಯಾಂಗ ವಿದ್ಯಾರ್ಥಿಗಳಿಗೆ ಸಂಚಾರವು ಮತ್ತೊಂದು ಸವಾಲಾಗಿದೆ. ಆದಕ್ಕಾಗಿ ಪೆಟ್ರೋನೆಟ್ ಎಂಎಚ್‌ಬಿ ಲಿಮಿಟೆಡ್ ಇ-ಮೊಬಿಲಿಟಿ ಸೈಕಲ್‌ಗಳು ಮತ್ತು ವೀಲ್‌ಚೇರ್‌ಗಳನ್ನು ಪ್ರಾಯೋಜಿಸಿದೆ. ಇವುಗಳನ್ನು ಎನ್‌ಐಟಿಕೆ ಸಂಸ್ಥೆಯೊಳಗೆ ಆಪ್ ಆಧಾರಿತ ನಿಯಂತ್ರಣ ಮತ್ತು ಸುಧಾರಿತ ವೈಶಿಷ್ಟ್ಯಗಳೊಂದಿಗೆ ತಯಾರಿಸಲಾಗಿದೆ ಎಂದರು.

ನಿರ್ದೇಶಕ ಪ್ರೊ. ರವಿ ಮಾತನಾಡಿ, ದಿವ್ಯಾಂಗ ವಿದ್ಯಾರ್ಥಿಗಳು ತರಗತಿಗಳಿಗೆ ಹಾಜರಾಗಲು ಮತ್ತು ವಿವಿಧ ಕಾರ್ಯಕ್ರಮಗಳಲ್ಲಿ ಭಾಗವಹಿಸಲು ಕ್ಯಾಂಪಸ್‌ನಲ್ಲಿ ಈ ವಾಹನಗಳ ಮೂಲಕ ಸ್ವತಂತ್ರವಾಗಿ ಸಂಚರಿಸಬಹುದು ಎಂದರು.

ಪೆಟ್ರೋನೆಟ್‌ನ ಹಿರಿಯ ಅಧಿಕಾರಿಗಳಾದ ತಾಂತ್ರಿಕ ವಿಭಾಗದ ಮುಖ್ಯಸ್ಥೆ ಸೈಸುಧಮ್ಮೀ, ಕಾರ್ಯಾಚರಣೆ ವಿಭಾಗದ ಮುಖ್ಯಸ್ಥ ಉದಯ ಪೈ ಉಪಸ್ಥಿತರಿದ್ದರು. ಎನ್‌ಐಟಿಕೆ ಸಂಸ್ಥೆಯ ಕಾರ್ಯನಿರ್ವಹಣಾಧಿಕಾರಿಗಳಾದ ಪ್ರೊ. ಕುಮಾರ್ ಜಿ.ಎನ್. (ರಿಜಿಸ್ಟ್ರಾರ್ ಇನ್ ಚಾರ್ಜ್), ಪ್ರೊ. ವೆಂಕಟೇಶ ಪೆರುಮಲ್ (ಡೀನ್-ಯೋಜನೆ ಮತ್ತು ಅಭಿವೃದ್ಧಿ), ಪ್ರೊ. ಪ್ರಸನ್ನ ಬೆಳೂರು (ಡೀನ್- ಅಲ್ಮುನಿ ಮತ್ತು ಕಾರ್ಪೊರೇಟ್ ಸಂಬಂಧಗಳು) ಸೇರಿದಂತೆ ಅನೇಕ ಅಧ್ಯಾಪಕರು, ಸಿಬ್ಬಂದಿ ಮತ್ತು ವಿದ್ಯಾರ್ಥಿ ಪ್ರತಿನಿಧಿಗಳು ಹಾಜರಿದ್ದರು.

Hosadiganth , Date: 04/03/26, p.-02